
# ಪೂರ್ಣ ಸೂರ್ಯ ಗ್ರಹಣ - ಸೋಮವಾರ, 8 ಏಪ್ರಿಲ್ 2024

**ಉತ್ತರ ಅಮೇರಿಕಾಗೆ ಸ್ವಾಗತ!**

ನೀವು ಪೂರ್ಣ ಸೂರ್ಯ ಗ್ರಹಣದ ಅನುಭವ ಪಡೆಯಲು ನಮ್ಮ ದೇಶವನ್ನು ಆಯ್ಕೆ ಮಾಡಿ ನಮ್ಮನ್ನು ಗೌರವಿಸಿರುತ್ತೀರಿ.  ಈ ಭವ್ಯವಾದ ಕ್ರಿಯೆಯನ್ನು ಎಲ್ಲರೂ ಸುರಕ್ಷಿತವಾಗಿ ವೀಕ್ಷಿಸಬೇಕೆಂದು ನಾವು ಬಯಸುತ್ತೇವೆ!

*ನಿಮ್ಮ ಅನುಕೂಲಕ್ಕಾಗಿ, ಈ ಸೂಚನೆಗಳನ್ನು ನಾವು ಕನ್ನಡದಲ್ಲಿ ಕೊಡ್ತಾಇದಿವಿ.  ಈ ಸೂಚನೆಗಳಿಗೆ, ನಿರ್ದೇಶನಗಳಿಗೆ ಮತ್ತು ಹಕ್ಕು ನಿರಾಕರಣೆಗಳಿಗೆ ("ಸೂಚನೆ") ಆಂಗ್ಲ ಆವೃತ್ತಿಯ, ಸೂರ್ಯನ ನೇರ ವೀಕ್ಷಣೆಗೆ ಸೌರದರ್ಶಕದ ಸಮರ್ಪಕ ಮತ್ತು ಸರಿಯಾದ ಬಳಕೆಯ ಮಾಹಿತಿ ಮತ್ತು ಮಾರ್ಗದರ್ಶನ, ಸಂಪೂರ್ಣ ಮೂಲವಾಗಿರುತ್ತದೆ. ಈ ಸೂಚನೆಗಳು* https://tinyurl.com/2024Instructions *ನಲ್ಲಿ ಲಭ್ಯವಿರುತ್ತದೆ. ಸೌರದರ್ಶಕವನ್ನು ಬಳಸಲು ನೀವು ಈ ಎಲ್ಲಾ ಸೂಚನೆಗಳನ್ನು ಓದಿ, ಅರ್ಥಮಾಡಿಕೊಂಡು ಅನುಸರಿಸಬೇಕು.* ***ಸೂಚನೆಗಳನ್ನು ಸರಿಯಾಗಿ ಅನುಸರಿಸದಿರುವುದು ವೈಯಕ್ತಿಕ ತೊಂದರೆಗೆ ಕಾರಣವಾಗಬಹುದು.***

ಖಗೋಳ ಶಾಸ್ತ್ರಜ್ಞರು ಏಪ್ರಿಲ್ 8, 2024ರ ಗ್ರಹಣವನ್ನು ಒಂದು "ಪೂರ್ಣ ಗ್ರಹಣ"ವೆಂದು ಕರೆದಿದ್ದು, ಆದರೆ ಈ ಪೂರ್ಣ ಗ್ರಹಣವನ್ನು ನೀವು ನೋಡಲು, ಉತ್ತರ ಅಮೇರಿಕಾ ಮೇಲೆ ಹಾಯ್ದು ಹೋಗುವ ಭೂಮಿಯ ಕಿರಿದಾದ ಪಥದ ಒಳಗೆ ಇರಬೇಕು (ಈ ಪಟ್ಟಿಯನ್ನು "ಪೂರ್ಣತೆಯ ಪಥ" ಎಂದು ಕರೆದಿರುತ್ತಾರೆ). ನೀವು ಈ ಪಥದಲ್ಲಿ ಇಲ್ಲದಿದ್ದಲ್ಲಿ, ಭಾಗಶಃ ಗ್ರಹಣವನ್ನು ಮಾತ್ರ ನೋಡುತ್ತೀರಿ! ಆದ್ದರಿಂದ ನೀವು ಪೂರ್ಣತೆಯ ಪಥದಲ್ಲಿ ಇರುವುದರ ಬಗ್ಗೆ ತಿಳಿಯುವುದು ಬಹು ಮುಖ್ಯ ಮತ್ತು ನೀವು ಇದಕ್ಕಾಗಿ ಬಳಸುವ ವಿಧಾನವನ್ನು ಸ್ವಲ್ಪ ಸಮಯದಲ್ಲಿ ವಿವರಿಸಲಾಗುವುದು.



*ಪೂರ್ಣತೆಯ ಪಥ*

## ತ್ವರಿತ ಪ್ರಾರಂಭ ಕೈಪಿಡಿ    ವಿವರವಾದ ಸೂಚನೆಗಳು

ಈ ದಾಖಲೆಯಲ್ಲಿ ಬಳಸಿರುವ "ಸೌರದರ್ಶಕ" ಎಂಬ ಪದವು ಈ ದಾಖಲೆಯ ಮೊದಲನೆಯ ಪುಟದಲ್ಲಿರುವ ಹಕ್ಕುನಿರಾಕರಣೆಯಲ್ಲಿರುವ "Eclipse Glasses" ಎಂಬ ಪದವನ್ನು ಪ್ರತಿನಿಧಿಸುತ್ತದೆ ಮತ್ತು ದಾಖಲೆಯೊಳಗೆ ಇತರೆಡೆ ಬಳಸಿದ್ದಲ್ಲಿಯೂ ಪ್ರತಿನಿಧಿಸುತ್ತದೆ.

ನೀವು ಸೂರ್ಯನನ್ನು ವೀಕ್ಷಿಸಲು ಬಳಸುವ ಸೌರದರ್ಶಕ, ಕಾನೂನು ಒಪ್ಪಂದವನ್ನು ಒಳಗೊಂಡಿದೆ.  ಯಾವುದೇ ಸಮಯದಲ್ಲಿ ಸೌರದರ್ಶಕವನ್ನು ಬಳಸಿ ಸೂರ್ಯನನ್ನು ವೀಕ್ಷಿಸಲು, ಸೂಚನೆಯಲ್ಲಿರುವ ಎಲ್ಲಾ ಸೂಚನೆಗಳನ್ನು ನಿಖರವಾಗಿ ಮತ್ತು ಸಂಪೂರ್ಣವಾಗಿ ಅನುಸರಿಸಬೇಕು.  ನಿಮಗೆ ಸೂಚನೆಗಳು ಅರ್ಥವಾಗದಿದ್ದಲ್ಲಿ, ಅಥವಾ ನೀವು ಸೂಚನೆಗಳನ್ನು ನಿಖರವಾಗಿ ಮತ್ತು ಸರಿಯಾಗಿ ಅನುಸರಿಸಲು ಸಾಧ್ಯವಾಗದಿದ್ದಲ್ಲಿ ಅಥವಾ ನಿಯಮಗಳಿಗೆ ಒಪ್ಪದಿದ್ದಲ್ಲಿ, ನೀವು ಯಾವುದೇ ವಿಧಾನವನ್ನು ಬಳಸಿ ಸೂರ್ಯನನ್ನು ವೀಕ್ಷಿಸುವುದಕ್ಕೆ ಪ್ರಯತ್ನ ಮಾಡಬಾರದೆಂದು ನಿಮಗೆ ಸೂಚನೆ ಮತ್ತು ಸಲಹೆ ನೀಡಲಾಗಿದೆ.

© 2018-2024

# ಸೌರದರ್ಶಕದ ತ್ವರಿತ ಪ್ರಾರಂಭ ಮಾರ್ಗದರ್ಶಿ

*ಈ ತ್ವರಿತ ಪ್ರಾರಂಭ ಕೈಪಿಡಿಯನ್ನು ವಿವರವಾದ ಸೂಚನೆಗಳಿಂದ ಸಾಂದ್ರೀಕರಿಸಿದ್ದು (ಸಂಗ್ರಹಿಸಿದ್ದು), ನೀವು ಇವುಗಳನ್ನು ಓದಿ, ಅರ್ಥಮಾಡಿಕೊಂಡು ಸೌರದರ್ಶಕ ಬಳಸಿ ಗ್ರಹಣ ವೀಕ್ಷಿಸಲು ಸಂಪೂರ್ಣವಾಗಿ ಅನುಸರಿಸಬೇಕು.*

1) ಗ್ರಹಣವು ನೀವು ಇರುವಲ್ಲಿ ಪೂರ್ಣವಾಗಿರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಹಾಗೂ ಭಾಗಶ: ಮತ್ತು (ಅನ್ವಯಿಸಿದರೆ) ಒಟ್ಟು ಹಂತಗಳ ಅಂದಾಜು ಸಂಪರ್ಕ ವೇಳೆಯನ್ನು ತಿಳಿಯಲು ನಿಮ್ಮ ಸ್ಥಳವನ್ನು eclipse2024.org/find-times ನಲ್ಲಿ ನೋಡುವುದು.

2) ಪೂರ್ಣ ಗ್ರಹಣವು ಒಂದು ಸಂಪೂರ್ಣ ಅಧ್ಭುತವಾದ ಘಟನೆಯಾಗಿದ್ದು, ನೀವು "ಪೂರ್ಣ ಪಥದ" ಹಾದಿಯಲ್ಲಿದ್ದರೆ ಮಾತ್ರ ಪೂರ್ಣತೆಯ ಅನುಭವವನ್ನು ಆನಂದಿಸಬಹುದಾಗಿದೆ. ಈ ಪಥವು 200 ಕಿಲೋಮೀಟರ್ ಗಳಷ್ಟು ಅಗಲವಿದೆ. ನಿಮ್ಮ ಯೋಜಿತ ಸ್ಥಳದಿಂದ ಪೂರ್ಣತೆಯು ಗೋಚರಿಸದಿದ್ದಲ್ಲಿ, ಪೂರ್ಣಪಥದ ಹಾದಿಯೊಳಗೆ ಬರುವಂತೆ ನಿಮ್ಮ ಸ್ಥಾನವನ್ನು ಸ್ಥಳಾಂತರಿಸುವಂತೆ ನಾವು ಬಲವಾಗಿ ಸಲಹೆ ನೀಡುತ್ತೇವೆ!

3) ಸೌರದರ್ಶಕ ಬಳಸಿ ಗ್ರಹಣ ನೋಡಲು, ದರ್ಶಕದ ಮಸೂರವನ್ನು ನೇರವಾಗಿ ನಿಮ್ಮ ಕಣ್ಣಿನ ಮುಂದೆ ಹಿಡಿಯುವುದು, ಇದರಿಂದ ನಿಮ್ಮ ಕಣ್ಣುಗಳು ನೇರವಾಗಿ ಸೂರ್ಯನನ್ನು ನೋಡುವುದರಿಂದ ರಕ್ಷಿಸಲ್ಪಡುತ್ತವೆ.

4) ಸೂರ್ಯನನ್ನು ನೋಡಲು ಸೌರದರ್ಶಕವನ್ನು ಯಾವಾಗ ಬಳಸಬೇಕು:

   a. ನಿಮ್ಮ ಸ್ಥಳದಲ್ಲಿ ಗ್ರಹಣವು ಸಂಪೂರ್ಣವಾಗಿಲ್ಲದಿದ್ದಲ್ಲಿ, ಸೌರದರ್ಶಕದ ಮೂಲಕ ಎಲ್ಲಾ ಸಮಯದಲ್ಲೂ ವೀಕ್ಷಿಸುವುದು. ನೀವು ಸರಿಯಾದ ರಕ್ಷಣೆ ಇಲ್ಲದೆ ಸೂರ್ಯನ ನೋಡುವುದು, ನಿಮ್ಮ ಕಣ್ಣಿಗೆ ಶಾಶ್ವತ ಅಪಾಯಕಾರಿ!

   b. ನಿಮ್ಮ ಸ್ಥಳದಲ್ಲಿ ಗ್ರಹಣವು ಸಂಪೂರ್ಣವಾಗಿದ್ದಾಗಲೂ, ಸೂರ್ಯನ ಬಿಂದುವಿನ (ಡಿಸ್ಕ್ ನ) ಪ್ರಕಾಶಮಾನ ಭಾಗದ ಯಾವುದೇ ಭಾಗದಲ್ಲಿ- ಒಂದು ಸಣ್ಣ ಭಾಗ ಗೋಚರಿಸಿದರೂ ಸಹ, ಸೌರದರ್ಶಕದ ಮೂಲಕ ವೀಕ್ಷಿಸಬೇಕು. ನೀವು ಈ ಸೂಚನೆಗಳನ್ನು ಅನುಸರಿಸದಿರುವುದು, ನಿಮ್ಮ ಕಣ್ಣಿಗೆ ಶಾಶ್ವತ ಅಪಾಯಕಾರಿ!

      i. ಆದಾಗ್ಯೂ, ಪೂರ್ಣತೆಯ ಅಲ್ಪ ಅವಧಿಯಲ್ಲಿ ಮಾತ್ರ, ಸೂರ್ಯನ ಬಿಂದುವಿನ ಯಾವುದೇ ಪ್ರಕಾಶಮಾನವಾದ. ಭಾಗವು ಗೋಚರಿಸದಿದ್ದಲ್ಲಿ, ನೀವು ಪೂರ್ಣ ಸೂರ್ಯ ಗ್ರಹಣವನ್ನು ಸೌರದರ್ಶಕವನ್ನು ಉಪಯೋಗಿಸದೆ ನೇರವಾಗಿ ವೀಕ್ಷಿಸುವುದು.

      ii. ವಾಸ್ತವವಾಗಿ, ನೀವು ಪೂರ್ಣತೆಯ ಸಮಯದಲ್ಲಿ ಸೂರ್ಯನನ್ನು ನೋಡಲು ಸೌರದರ್ಶಕ ಬಳಸಿದಲ್ಲಿ, ನೀವು ಸಂಪೂರ್ಣವಾಗಿ ಏನೂ ನೋಡುವುದಿಲ್ಲ.

      iii. ಸಂಪೂರ್ಣಾವಧಿ ಮುಗಿದ ನಂತರ, ಸೂರ್ಯನ ಬಿಂದುವಿನ ಪ್ರಕಾಶಮಾನವಾದ ಭಾಗವು ಗೋಚರಿಸಿದ ತಕ್ಷಣ, ನೀವು ಸೌರದರ್ಶಕ ಬಳಸಲು ಹಿಂತಿರುಗುವುದು.

5) ಬೇರೆ ರೀತಿ ಹೇಳಬೇಕೆಂದರೆ/ಅರ್ಥಾತ್,

**ಸೂರ್ಯನ ಪ್ರಕಾಶಮಾನವಾದ ಬಿಂದುವಿನ ಯಾವುದೇ ಭಾಗವು ಗೋಚರಿಸಿದ ತಕ್ಷಣ, ನೀವು ಸೂರ್ಯನನ್ನು ನೋಡಲು ಸೌರದರ್ಶಕ ಬಳಸಬೇಕಾಗುತ್ತದೆ!**

© 2018-2024
Eclipse2024.org

# *1) ಸೌರದರ್ಶಕದ ಬಳಕೆಗೆ ಸಾಮಾನ್ಯ ಸೂಚನೆಗಳು*



1) [ಅನ್ವಯಿಸಿದ್ದಲ್ಲಿ] ಎಚ್ಚರಿಕೆಯಿಂದ ಸೌರದರ್ಶಕದ ಪ್ಯಾಕೇಜ್ ಬಿಚ್ಚುವುದು.
2) ಸೌರದರ್ಶಕವನ್ನು ಬಳಸದಿದ್ದಾಗ ಸುರಕ್ಷಿತವಾಗಿಟ್ಟುಕೊಳ್ಳಿ.
3) ಸೌರದರ್ಶಕವನ್ನು ಪ್ರತಿಭಾರಿ ಬಳಸುವ ಮುನ್ನ ಪರೀಕ್ಷಿಸಿ; ಮಸೂರದ ಪೊರೆ (Lens Film) ಅಥವಾ ತೆಳುವಾದ ಹಾಳೆ ಹಾನಿಗೊಳಗಾಗಿದ್ದರೆ ಅಥವಾ ಯಾವುದೇ ರೀತಿಯಲ್ಲಿ ಸುಕ್ಕಾಗಿದ್ದರೆ, ಸೌರದರ್ಶಕವನ್ನು ಕತ್ತರಿಸಿ ನಾಶಗೊಳಿಸಿ ಮತ್ತು ಹಾನಿಯಾಗದ ಬದಲಿ ದರ್ಶಕವನ್ನು ಪಡೆಯಿರಿ.
4) ಮಸೂರದ ಪೊರೆ ಯಾವುದೇ ರೀತಿಯಲ್ಲಿ ಹಾನಿಗೊಳಗಾಗಿದ್ದರೆ, ಯಾವುದೇ ಸಮಯದಲ್ಲೂ ಸೂರ್ಯನ ವೀಕ್ಷಿಸಲು ಸೌರದರ್ಶಕ ಬಳಸಬೇಡಿ.
5) ಸೌರದರ್ಶಕದಿಂದ ಮಸೂರದ ಪೊರೆ ಅಥವಾ ತೆಳುವಾದ ಹಾಳೆ ತೆಗೆದುಹಾಕಬೇಡಿ, ಹಾಗೂ ತೆಗೆದು ಹಾಕಿದ ಮಸೂರದ ಹಾಳೆಯನ್ನು ಯಾವುದೇ ರೀತಿಯಲ್ಲಿ ಸೂರ್ಯ ವೀಕ್ಷಣೆಗೆ ಬಳಸಬೇಡಿ.
6) ಸೌರದರ್ಶಕದಲ್ಲಿನ ಸರಿಯಾಗಿ ಮೌಂಟ್ ಮಾಡಿದ, ಹಾನಿಯಾಗದ ಮಸೂರಗಳು, ಕಾಣುವ ಬೆಳಕಿನ ಅಪಾಯಕಾರಿ ಮಟ್ಟದ, ಹಾಗೂ ತೊಂದರೆಯುಂಟುಮಾಡುವ ಯು.ವಿ.ಕಿರಣಗಳನ್ನು ಮತ್ತು ಇತರೆ ಸೂರ್ಯನ ಕಿರಣಗಳನ್ನು ಸುರಕ್ಷಿತವಾಗಿ ನಿರ್ಬಂಧಿಸುತ್ತವೆ. ಆದುದರಿಂದ ಸೂರ್ಯದರ್ಶಕವನ್ನು ಸೂಚನಾನುಸಾರ ಉಪಯೋಗಿಸಿ ಸೂರ್ಯನನ್ನು ನೋಡುವುದು ಅತಿ ಸುರಕ್ಷಿತ. ಸೂರ್ಯ ಗ್ರಹಣದ ಸಮಯದಲ್ಲಿ ವಿಶೇಷ "ಗ್ರಹಣದ ಕಿರಣಗಳು" ಇರುವುದಿಲ್ಲದ ಕಾರಣ, ಸೂರ್ಯನ ವೀಕ್ಷಿಸುವುದರಿಂದ ಹೆಚ್ಚು ಕಡಿಮೆ ಯಾವುದೇ ರೀತಿಯ ಅಪಾಯಕಾರಿ ತೊಂದರೆಗಳು ಇರುವುದಿಲ್ಲ.
7) **ಸೂರ್ಯನ ಪ್ರಕಾಶಮಾನವಾದ ಯಾವುದೇ ಭಾಗವು ಗೋಚರಿಸಿದಲ್ಲಿ, ನೀವು ಸೌರದರ್ಶಕವನ್ನು ಇಲ್ಲಿ ವಿವರಿಸಿರುವ ರೀತಿಯಲ್ಲಿ ಉಪಯೋಗಿಸಬೇಕು. ನೀವು ಯಾವುದೇ ಮೂಲದಿಂದ ದಾಖಲಿಸಿದರೂ ಇದು ಗ್ರಹಣ ಸಂಪರ್ಕದ ಯಾವುದೇ ಅವಧಿಯಲ್ಲಿ ನಿಜವಾಗಿದೆ (ಅಂದರೆ "C2" ಮತ್ತು "C3" ಮೇಲೆ ಹೇಳಿದಂತೆ).**
8) ಸೌರದರ್ಶಕವನ್ನು, ಬೆಳಕನ್ನು ಪ್ರತಿಬಿಂಬಿಸುವ ಅಥವಾ ಪ್ರಸಾರ ಮಾಡುವ ಯಾವುದೇ ರೀತಿಯ ಸಾಧನ ಅಥವಾ ವಸ್ತುಗಳು("ಬೆಳಕಿನ ಸಾಧನ"), ದೂರದರ್ಶಕ, ದುರ್ಬೀನು, ಕ್ಯಾಮೆರಾ, ಮಸೂರ, ಕನ್ನಡಿ ಅಥವಾ ಇತರೆ ಬೆಳಕಿನ ಉಪಕರಣಗಳ ಸಂಯೋಜನೆಯೊಂದಿಗೆ ಬಳಸಬೇಡಿ.
9) ಬೆಳಕಿನ ಉಪಕರಣಗಳು ಹೇಗಾದರೂ ಸೂರ್ಯಕಿರಣಗಳನ್ನು ಸಂಗ್ರಹಿಸಿ, ಕೇಂದ್ರೀಕರಿಸಿ ಅಥವಾ ಸೂರ್ಯ ಕಿರಣಗಳನ್ನು ಮರುನಿರ್ದೇಶನ ಮಾಡುವುದರಿಂದ, ಇಂತಹ ಯಾವುದೇ ಬೆಳಕಿನ ಉಪಕರಣಗಳನ್ನು ಎಂದಿಗೂ ನೇರವಾಗಿ ಸೂರ್ಯನೆಡೆ ತಿರುಗಿಸಬೇಡಿ ಮತ್ತು ಸೂರ್ಯನೆಡೆ ತಿರುಗಿಸಿದ ಬೆಳಕಿನ ಉಪಕರಣದಿಂದ ಮೂಡಿದ ಸೂರ್ಯನ ಚಿತ್ರವನ್ನು ನೇರವಾಗಿ ನೋಡಬೇಡಿ.
10) ಸೌರದರ್ಶಕವನ್ನು ಪ್ರಾಣಿಗಳಿಗೆ ಅಥವಾ ತಾತ್ಕಾಲಿಕವಾಗಿ ದುರ್ಬಲಗೊಂಡವರಿಗೆ, ಅನಕ್ಷರಸ್ಥರಿಗೆ, ಸೌರದರ್ಶಕ ಉಪಯೋಗಿಸುವ ಬಗ್ಗೆ ಅರ್ಥಮಾಡಿಕೊಳ್ಳದ ಮತ್ತು ಸೌರದರ್ಶಕದ ಸುರಕ್ಷಿತ ಬಳಕೆಯ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗದ ಅಥವಾ ಕಾನೂನುಬದ್ಧವಾಗಿ ತಮ್ಮ ಕಾರ್ಯಗಳ ಪರಿಣಾಮದ ಜವಾಬ್ದಾರಿ ಸ್ವೀಕರಿಸಲು ಅನುಮತಿಸದವರಿಗೆ, ಉಪಯೋಗಿಸಲು ಅನುಮತಿಸಕೂಡದು.



11) ಸೌರದರ್ಶಕ ಬಳಸಲು:
ಸೌರದರ್ಶಕವನ್ನು ಸಂಪೂರ್ಣವಾಗಿ ನಿಮ್ಮ ಕಣ್ಣುಗಳ ಮತ್ತು ಸೂರ್ಯನ ನಡುವೆ ಹಿಡಿದುಕೊಂಡು, ಸೌರದರ್ಶಕದ ಹಾನಿಯಾಗದ ಮಸೂರದ ಮೂಲಕ ಸೂರ್ಯನೆಡೆಗೆ ನೋಡಲು, ಮಸೂರದ ಹಾಳೆಯನ್ನು ಎಲ್ಲಾ ಸಮಯದಲ್ಲೂ ಸಂಪೂರ್ಣವಾಗಿ ನಿಮ್ಮ ಕಣ್ಣುಗಳ ಮತ್ತು ಸೂರ್ಯನ ನಡುವೆ ಇಟ್ಟುಕೊಳ್ಳುವುದು. ಸೌರದರ್ಶಕವು ಕಾರ್ಡ್‌ಬೋರ್ಡ್ ಕನ್ನಡಕಗಳ ಆಕಾರದಲ್ಲಿದ್ದರೆ,ನೀವು ಕನ್ನಡಕವನ್ನು ಸಾಂಪ್ರದಾಯಿಕ ಕನ್ನಡಕಗಳನ್ನು ಧರಿಸಿ ಬಳಸುವ ರೀತಿಯಲ್ಲಿ ಮಡಿಚಿ ಬಳಸಬಹುದು. ನೀವು ಸೌರದರ್ಶಕದ ಹಾನಿಯಾಗದ ಮಸೂರದ ಮೂಲಕ ನೇರವಾಗಿ ನೋಡದ ಹೊರತು, ಪೂರ್ಣ ಗ್ರಹಣವಾಗದಿದ್ದಲ್ಲಿ ನೇರವಾಗಿ ಸೂರ್ಯನನ್ನು ನೋಡಬೇಡಿ. (ಅದು C2 ಮತ್ತು C3ನ ಅವಧಿಯಲ್ಲಿ ಕೆಳಗಿನ ಪಟ್ಟಿಯಲ್ಲಿ ಸೂಚಿಸಿದಂತೆ, ನಿಮ್ಮ ವೀಕ್ಷಣಾ ಸ್ಥಳಕ್ಕೆ ಅನ್ವಯವಾಗುವ ವೇಳೆ).
12) ಕಣ್ಣಿನ ರಕ್ಷಣೆಯ ಸಲುವಾಗಿ ಸೌರದರ್ಶಕದಲ್ಲಿ ಮೂಲತ: ತಯಾರಿಸಿ ಅಳವಡಿಸಿರುವ ಮಸೂರವನ್ನು ಹೊರತುಪಡಿಸಿ, ಯಾವುದೇ ರೀತಿಯ ಸಾಧನ ಅಥವಾ ವಸ್ತುಗಳನ್ನು, ಸೂರ್ಯನನ್ನು ವೀಕ್ಷಿಸಲು ಪ್ರಯತ್ನಿಸುವಾಗ ಬಳಸಬೇಡಿ.
13) ಈ ಸೂಚನೆಗಳ ಬಗ್ಗೆ ನೀವು ಯಾವುದೇ ಪ್ರಶ್ನೆಗಳನ್ನು ಹೊಂದಿದ್ದಲ್ಲಿ, ದಯವಿಟ್ಟು Eclipse2024.org ಯನ್ನು ಇಲ್ಲಿ https://tinyurl.com/glasses-questions ಸಂಪರ್ಕಿಸಿ.

© 2018-2024
Eclipse2024.org

## ** ನಾನಿರುವ ಸ್ಥಳದಲ್ಲಿ ಗ್ರಹಣವು *ಪೂರ್ಣ* **

ನೀವು ಪೂರ್ಣತೆಯ ಹಾದಿಯಲ್ಲಿದ್ದು, ಒಂದು ಅಪರೂಪದ ಮತ್ತು ಅಧ್ಭುತ ಕ್ರಿಯೆಯನ್ನು ಅನುಭವಿಸುತ್ತೀರಿ! ನೀವಿರುವ ಸ್ಥಳದಲ್ಲಿ ಗ್ರಹಣವು ಯಾವಾಗ ಪೂರ್ಣತೆಯನ್ನು ಪಡೆಯುತ್ತದೆ ಎಂದು ನಿರ್ಧರಿಸುವುದು ಬಹುಮುಖ್ಯ. ನೀವು ಇದನ್ನು ಕೆಳಗೆ ನಮೂದಿಸಿರುವ ಸಮಯವನ್ನು ಉಲ್ಲೇಖಿಸಿ ನಿರ್ಧರಿಸಲು ಸಾಧ್ಯವಾಗುತ್ತದೆ, ಏಕೆಂದರೆ ಪೂರ್ಣತೆಯ ಸಮಯದಲ್ಲಿ ಯಾವುದೇ ಪ್ರಕಾಶಮಾನವಾದ ಭಾಗವು ಸೂರ್ಯನ ಬಿಂಬದಲ್ಲಿ ಗೋಚರಿಸುವುದಿಲ್ಲ.

1) ನೀವಿರುವ ನಿರ್ದಿಷ್ಟ ಸ್ಥಳಕ್ಕೆ, eclipse2024.org/find-times ನಲ್ಲಿ ಒದಗಿಸಿರುವ ಮಾಹಿತಿಯನ್ನು ಆಧರಿಸಿ, ಪ್ರತಿ ಗ್ರಹಣ ಘಟನೆಯ ಅಂದಾಜು ಸಮಯವನ್ನು ಕೆಳಗೆ ನಮೂದಿಸಿರುವ ಪಟ್ಟಿಯಿಂದ (ಕೆಳಗಿನ ಪಟ್ಟಿಯಿಂದ) ಬರೆದುಕೊಳ್ಳಿ. (ನೀವಿರುವ ಕಾಲವಲಯಕ್ಕನುಗುಣವಾಗಿ ಸಮಯವನ್ನು ಹೊಂದಿಸುವುದನ್ನು ಮರೆಯಬೇಡಿ!):

| | | | | | |
|---|---|---|---|---|---|
| **C1 ಗೆ ಮೊದಲು** | * ಗ್ರಹಣವು ಇರುವುದಿಲ್ಲ * | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |
| **C1** | **ಭಾಗಶ: ಹಂತ ಆರಂಭವಾಗುತ್ತದೆ:** | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |
| **C2** | **ಪೂರ್ಣ ಹಂತ ಆರಂಭವಾಗುತ್ತದೆ:** | |  |  | **ಸಿ2 ಅವಧಿಯ ನಂತರ**, ನೀವು ಬರಿಗಣ್ಣಿನಿಂದ ವೀಕ್ಷಿಸಬಹುದು |
| **ಗ್ರಹಣ ಕಾಲದ ಮಧ್ಯ** | **ಸಂಭವಿಸುತ್ತದೆ:** | |  |  | **ನೀವು ಬರಿಗಣ್ಣಿನಿಂದ ವೀಕ್ಷಿಸಬಹುದು!** |
| **C3** | **ಪೂರ್ಣ ಹಂತ ಕೊನೆಗೊಳ್ಳುತ್ತದೆ:** | |  |  | ಸಿ3 ಅವಧಿಯ ನಂತರ, ನೀವು ಮತ್ತೆ ಸೌರದರ್ಶಕವನ್ನು **ಬಳಸಬೇಕಾಗುತ್ತದೆ** |
| **C4** | **ಭಾಗಶ: ಹಂತ ಕೊನೆಗೊಳ್ಳುತ್ತದೆ:** | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |
| **C4 ನ ನಂತರ** | * ಗ್ರಹಣವು ಇರುವುದಿಲ್ಲ * | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |

## ** ನಾನಿರುವ ಸ್ಥಳದಲ್ಲಿ ಗ್ರಹಣವು ***ಪೂರ್ಣವಲ್ಲ*** **

ನೀವು ಪೂರ್ಣತೆಯ ಪಥದಲ್ಲಿ ಇಲ್ಲದ್ದರಿಂದ, ನೀವು ಪೂರ್ಣ ಸೂರ್ಯ ಗ್ರಹಣದ ಸೌಂದರ್ಯವನ್ನು ಅನುಭವಿಸಲು ಸಾಧ್ಯವಿಲ್ಲ. (ಈ ಗಮನಾರ್ಹ ಅನುಭವವನ್ನು ಹಂಚಿಕೊಳ್ಳಲು ನೀವು ನಿಮ್ಮನ್ನು ಪೂರ್ಣಪಥದ ಹಾದಿಗೆ ಮರುಸ್ಥಾಪಿಸಿಕೊಳ್ಳುವಂತೆ ನಾವು ಬಲವಾಗಿ ಶಿಫಾರಸ್ಸು ಮಾಡುತ್ತೇವೆ!)

1) ನೀವಿರುವ ನಿರ್ದಿಷ್ಟ ಸ್ಥಳಕ್ಕೆ, eclipse2024.org/find-times ನಲ್ಲಿ ಒದಗಿಸಿರುವ ಮಾಹಿತಿಯನ್ನು ಆಧರಿಸಿ, ಪ್ರತಿ ಗ್ರಹಣ ಘಟನೆಯ ಅಂದಾಜು ಸಮಯವನ್ನು ಕೆಳಗೆ ನಮೂದಿಸಿರುವ ಪಟ್ಟಿಯಿಂದ (ಕೆಳಗಿನ ಪಟ್ಟಿಯಿಂದ) ಬರೆದುಕೊಳ್ಳಿ. (ನೀವಿರುವ ಕಾಲವಲಯಕ್ಕನುಗುಣವಾಗಿ ಸಮಯವನ್ನು ಹೊಂದಿಸುವುದನ್ನು ಮರೆಯಬೇಡಿ!):

| | | | | | |
|---|---|---|---|---|---|
| ***C1 ಗೆ ಮೊದಲು*** | * ಗ್ರಹಣವು ಇರುವುದಿಲ್ಲ * | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |
| ***C1*** | **ಭಾಗಶ: ಹಂತ ಆರಂಭವಾಗುತ್ತದೆ:** | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |
| ***ಗ್ರಹಣ ಕಾಲದ ಮಧ್ಯ*** | **ಸಂಭವಿಸುತ್ತದೆ:** | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |
| ***C4*** | **ಭಾಗಶ: ಹಂತ ಕೊನೆಗೊಳ್ಳುತ್ತದೆ:** | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |
| ***C4 ನ ನಂತರ*** | * ಗ್ರಹಣವು ಇರುವುದಿಲ್ಲ * | |  |  | ನೀವು ಸೌರದರ್ಶಕವನ್ನು ಬಳಸ**ಬೇಕು** |

*(ಗ್ರಹಣವು ನೀವಿರುವ ಸ್ಥಳದಲ್ಲಿ ಪೂರ್ಣವಲ್ಲವಾದ್ದರಿಂದ C2 ಮತ್ತು C3 ಅವಧಿ ಇರುವುದಿಲ್ಲದಿರುವುದನ್ನು ಗಮನಿಸುವುದು!)*

2) **ನೀವಿರುವೆಡೆಯಲ್ಲಿ ಗ್ರಹಣವು ಪುರ್ಣವಲ್ಲವಾದ್ದರಿಂದ, ನೀವು ಸೂರ್ಯನ ವೀಕ್ಷಣೆಗೆ ಸೌರದರ್ಶಕವನ್ನು ಯಾವಾಗಲೂ ಬಳಸಬೇಕು.**
ಮತ್ತೊಮ್ಮೆ, ನೀವು ನಿಮ್ಮನ್ನು ಪೂರ್ಣಪಥದ ಹಾದಿಗೆ ಮರುಸ್ಥಾಪಿಸಿಕೊಳ್ಳುವಂತೆ ಶಿಫಾರಸ್ಸು ಮಾಡುತ್ತೇವೆ. ನೀವು ಸುರಕ್ಷತೆಯಿಂದ ಗ್ರಹಣದ ಭಾಗಶ: ಹಂತಗಳನ್ನು ವೀಕ್ಷಿಸಲು ಸೌರದರ್ಶಕವನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಲು ಮರೆಯದಿರಿ!

3) ಈ ಸೂಚನೆಗಳು ಗ್ರಹಿಕೆಗೆ ಸಹಾಯವಾಗುವಂತೆ ಪೂರಕ ವಿವರಣಾತ್ಮಕ ರೇಖಾಚಿತ್ರಗಳ ಜೊತೆಗೂಡಿರುತ್ತದೆ.

---

***ನೀವು ಕೆಳಗಿನ ಹೇಳಿಕೆಗಳನ್ನು ಓದಿ, ಅರ್ಥಮಾಡಿಕೊಂಡು ಅನುಸರಿಸಬೇಕು:***

**ನಾನು ಸೌರದರ್ಶಕವನ್ನು ಸುರಕ್ಷಿತವಾಗಿ ಬಳಸಲು, ಬಳಕೆಯ ಕುರಿತ ಎಲ್ಲಾ ಸೂಚನೆಗಳನ್ನು ಅನುಸರಿಸಬೇಕು.**

## ಸೂರ್ಯನನ್ನು ವೀಕ್ಷಿಸುವಾಗ ನಾನು ಯಾವಾಗಲೂ ಸೌರದರ್ಶಕವನ್ನು ಬಳಸಬೇಕು.

© 2018-2024

